

ಹಿಂದೆಯೂ ಕೆಲವು ಸಿನಿಮಾಗಳು ನಿಷೇಧಕ್ಕೆ ಒಳಗಾಗಿದ್ದವು. ಆದರೆ, ನಿಷೇಧ ಹೇರುವಾಗ ಕೆಲವಾದರೂ ನಿಯಮಗಳನ್ನು ಪಾಲಿಸುತ್ತಾ ಇದ್ದರು. ಈಗಿನವರ ರೀತಿ 'ಆ ಶಬ್ದ ಇರಬಾರದು, ಈ ವಾಕ್ಯ ಇರಬಾರದು' ಎಂಬ ನಿರ್ಬಂಧ ಹಾಕುತ್ತಿರಲಿಲ್ಲ. ಈಗಿನವರು 'ಬಾಂಬೆ ಹೆಸರು ಇಡಬಾರದು, ಪಂಜಾಬ್ ಹೆಸರು ಹಾಕಬಾರದು' ಎಂದೂ ಹೇಳುತ್ತಿದ್ದಾರೆ! ಇದರ ಹಿಂದೆ ಯಾವ ರೀತಿಯ ಆಲೋಚನೆ ಇದೆ ಎಂಬುದನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. 'ಪಂಜಾಬ್‌ನಲ್ಲಿ ಆ ರೀತಿಯ ಸಮಸ್ಯೆ ಇಲ್ಲ. ಹಾಗಾಗಿ ಆ ಪದವನ್ನು ಬಳಸುವುದು ತಪ್ಪು' ಎಂಬುದು ಅವರ ವಾದ. ಅಂದರೆ ಪ್ರಭುತ್ವಕ್ಕೆ ಆ ರೀತಿಯ ಸಮಸ್ಯೆ ಇದೆ ಎಂದು ಹೇಳುವುದು ಇಷ್ಟ ಇಲ್ಲ. ಆ ರೀತಿಯ ಜವಾಬ್ದಾರಿ ಕೊಡುತ್ತಾ ಹೋದರೆ, ಅದರ ವಿರುದ್ಧ ಪ್ರತಿಭಟಿಸದೆ ಹೋದರೆ ನಾಳೆ ಎಲ್ಲದಕ್ಕೂ ನಿರ್ಬಂಧ ಹೇರುತ್ತಾ ಹೋಗಬಹುದು. 'ಪೊಲೀಸರು ಲಂಚ ತೆಗೆದುಕೊಳ್ಳುತ್ತಾರೆ' ಎಂದು ತೋರಿಸಿದರೆ ಅದಕ್ಕೂ ತಡೆ ಒಡ್ಡಬಹುದು. ಇದು ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರಲಿದೆ ಎಂದೂ ಅವರು ಕಾರಣ ನೀಡಬಹುದು.

'ತಬರನ ಕಥೆ' ಚಲನಚಿತ್ರ ನಿರ್ದೇಶನದ ಸಮಯದಲ್ಲಿ ನಡೆದ ಘಟನೆಯನ್ನು ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. ಸಿನಿಮಾದ ಕೊನೆಯಲ್ಲಿ ತಬರ ಪ್ರಭುತ್ವವನ್ನು ಟೀಕೆ ಮಾಡುತ್ತಾನೆ. 'ಆಡಳಿತ ನಡೆಸುತ್ತಾ ಇರುವವರು ಸೂಳೆ ಮಕ್ಕಳು' ಎಂದು ಆಕ್ರೋಶ ಹೊರ ಹಾಕುತ್ತಾನೆ. 25 ವರ್ಷಗಳಿಂದ ಒಂದೇ ಪಕ್ಷದವರು ರಾಜ್ಯವನ್ನು ಆಳಿದ್ದರು. ಆಗಲೂ ಸೆನ್ಸಾರ್‌ನವರು ತಡೆ ಹಾಕಲು ಅವಕಾಶ ಇತ್ತು. ಆಗ ಸೆನ್ಸಾರ್ ಅಧಿಕಾರಿ 'ಈ ದೃಶ್ಯವನ್ನು ಕತ್ತರಿಸಬಹುದಾ?' ಎಂದು ಪ್ರಶ್ನಿಸಿದರು. ನಾನು 'ಆಗಲ್ಲ' ಎಂದೆ. ತಬರನ ಸಿಟ್ಟು ನಮ್ಮ ಅನೇಕರ ಸಿಟ್ಟು ಆಗಿರುತ್ತದೆ. ಅದು ನಮ್ಮ ನಿಲುವು ಆಗಿರುತ್ತದೆ. ನಾವು ಸೆನ್ಸಾರ್ ಬೇಕು ಎಂದರೆ ಇಂತಹ ವಿಷಯಗಳಿಗೆ ಕಡಿವಾಣ ಹೇರುವ ಸಾಧ್ಯತೆಯೂ ಇದೆ. ಇದು ಅಪಾಯಕಾರಿ.

ಸೆನ್ಸಾರ್ ಮಂಡಳಿಯವರಿಗೆ ಬೇಕಿರುವುದು ವಿಶಾಲ ದೃಷ್ಟಿಕೋನ. ಯಾವುದು ಅಭಿಪ್ರಾಯ, ಯಾವುದು ಅಶ್ಲೀಲ ಎಂದು ಗಮನಿಸಿ ನಿರ್ಧಾರ ತೆಗೆದುಕೊಳ್ಳಬೇಕು. ಇತ್ತೀಚಿನವರೆಗೆ ಈ ರೀತಿಯೇ ಆಗುತ್ತಿತ್ತು. ಮಂಡಳಿ ಅನೈತಿಕ ಪೊಲೀಸರ ರೀತಿ ಕೆಲಸ ಮಾಡಬಾರದು. ನಾವೆಲ್ಲ ಸೆನ್ಸಾರ್ ಬೇಕು ಎಂದರೆ ಅವರು ಅನೈತಿಕ ಪೊಲೀಸ್‌ಗಿರಿ ಶುರು ಮಾಡುತ್ತಾರೆ. ಬೇಡ ಎಂದರೆ, ಹಿಂಸಾಚಾರವನ್ನು ವೈಭವೀಕರಿಸುವ ಸಮಾಜವಿರೋಧಿ ಚಟುವಟಿಕೆ, ಮಕ್ಕಳ ಮತ್ತು ಮಹಿಳೆಯರ ಮೇಲಿನ ಹಿಂಸಾಚಾರ– ಅತ್ಯಾಚಾರ, ಅಂಗವಿಕಲರ ಹೀಯಾಳಿಕೆ ಮಾಡುವಂತಹ ಸಿನಿಮಾಗಳು ಬರಲಾರಂಭಿಸುತ್ತವೆ.

ಈ ವಿಷಯದಲ್ಲಿ ಚಲನಚಿತ್ರ ಉದ್ಯಮ ಸ್ವಲ್ಪ ಜವಾಬ್ದಾರಿಯುತವಾಗಿ ನಡೆದುಕೊಳ್ಳಲು ಸಾಧ್ಯವೇ ಎಂದು ಆಲೋಚಿಸಬೇಕಿದೆ. ಇದು ಮಾದರಿ ಪರಿಕಲ್ಪನೆ. ಅದನ್ನು ನಾವು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಕೆಲವು ನಿರ್ದೇಶಕರು 'ಮಾದರಿ'ಗಳಾಗಬಹುದು ಅಷ್ಟೇ.

ಈ ಹಿಂದೆ ರಿಮೇಕ್ ವಿವಾದ ಎದ್ದಿತ್ತು. ಆಗ ರಿಮೇಕ್ ಹೌದೋ ಅಲ್ಲವೋ ಎಂದು ನಿರ್ಧರಿಸುವ ಹೊಣೆಯನ್ನು ಉದ್ದಿಮೆಗೆ ನೀಡಲಾಯಿತು. 'ಸಿನಿಮಾದಲ್ಲಿ ರಿಮೇಕ್ ಅಂಶ ಶೇಕಡಾ 50ಕ್ಕಿಂತ ಜಾಸ್ತಿ ಇಲ್ಲ, ಶೇಕಡಾ 30ರಷ್ಟು ಮಾತ್ರ ಇದೆ' ಎಂದು ಪ್ರಮಾಣಪತ್ರ ನೀಡಿದರು. ರಿಮೇಕ್ ಸಿನಿಮಾ ಅಲ್ಲ ಎಂದೂ ಹೇಳಿಬಿಟ್ಟರು. ಅವರು ಚಾಪೆ ಕೆಳಗೆ ನುಸುಳುವ ತಂತ್ರ ಅನುಸರಿಸಿದರು. ಸೆನ್ಸಾರ್ ವಿಷಯದಲ್ಲೂ ಇಂತಹ ಅಪಾಯ ಉಂಟಾಗುವ ಸಾಧ್ಯತೆ ಇದೆ.

ಇವತ್ತು ಇಂಟರ್‌ನೆಟ್‌ನಲ್ಲಿ ಅಶ್ಲೀಲ ಚಿತ್ರಗಳು ಸುಲಭದಲ್ಲಿ ಸಿಗುತ್ತವೆ. ಟಿ.ವಿ.ಯಲ್ಲೂ ಕಾಣುತ್ತೇವೆ. ಸಿನಿಮಾದಲ್ಲಿ ಮಾತ್ರ ಸೆನ್ಸಾರ್ ಯಾಕೆ ಬೇಕು ಎಂದು ಪ್ರಶ್ನಿಸುವವರು ಸಾಕಷ್ಟು ಮಂದಿ ಇದ್ದಾರೆ. ದೇಶದ ಟಿ.ವಿ. ಚಾನೆಲ್‌ಗಳಲ್ಲಿ ಅಶ್ಲೀಲ ದೃಶ್ಯಗಳು ಬರುವುದಿಲ್ಲ. ಇಂಟರ್‌ನೆಟ್‌ನಲ್ಲಿ ಎಲ್ಲವೂ ಸುಲಭದಲ್ಲಿ ಸಿಗುತ್ತದೆ. ಅದಕ್ಕೆ ಕಡಿವಾಣ ಹಾಕುವುದು ಕಷ್ಟ. ಅಲ್ಲದೆ ವ್ಯಕ್ತಿ

**ಸೆನ್ಸಾರ್ ಮಂಡಳಿ ಅನೈತಿಕ ಪೊಲೀಸರ ರೀತಿ ಕೆಲಸ ಮಾಡಬಾರದು.**